# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

# KITTURU RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: academic@rcub.ac.in
registrar@rcub.ac.in

ಕುಲಸಚಿವರ ಕಾರ್ಯಾಲಯ
Office of the Registrar

Website: www.rcub.ac.in
Phone No:0831-2565241


ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳವಿಭಾಗ/149026/2026-27/ 1811 ದಿನಾಂಕ: 06 JUL 2026

## ಸುತ್ತೋಲೆ

**ವಿಷಯ:** 2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕಎರಡು ವರ್ಷದ ಬಿ.ಪಿ.ಇಡಿ (B.P.Ed) ಕೋರ್ಸ್‌ನ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12–06–2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳ ವ್ಯಾಪ್ತಿಯ ಎಲ್ಲ ಸಂಯೋಜಿತ ಸ್ನಾತಕ ಬಿ.ಪಿ.ಇಡಿ (B.P.Ed) ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕ ಬಿ.ಪಿ.ಇಡಿ (B.P.Ed) ಕೋರ್ಸ್ ಪ್ರಥಮ ಸೆಮಿಸ್ಟರ್‌ನ ಪ್ರವೇಶಾತಿ ಪ್ರಕ್ರಿಯೆಯನ್ನು ಈ ಕೆಳಗಿನ ದಿನಾಂಕ ಮತ್ತು ನಿಬಂಧನೆಗೊಳಪಟ್ಟು **UUCMS ತಂತ್ರಾಂಶದ** ಮೂಲಕ ಪ್ರವೇಶಾತಿ ಪಡೆದುಕೊಳ್ಳತಕ್ಕದ್ದು.

**2026–27 ನೇ ಶೈಕ್ಷಣಿಕ ಸಾಲಿನ ಬಿ.ಪಿ.ಇಡಿ ಪ್ರಥಮ ಸೆಮಿಸ್ಟರ್ ಪ್ರವೇಶಾತಿ ವಿವರಣೆ**

| ಅ.ಸಂ | ಬಿ.ಪಿ.ಇಡಿ ಪ್ರಥಮ ಸೆಮಿಸ್ಟರ್ ಪ್ರವೇಶಾತಿ ಪ್ರಕ್ರಿಯೆಯ ವಿವರ | ಪ್ರವೇಶಾತಿ ಅವಧಿ |
|---|---|---|
| 01 | UUCMS ತಂತ್ರಾಶದ ಮೂಲಕ (ಆನ್–ಲೈನ್) ದಂಡ ರಹಿತವಾಗಿ ಪ್ರವೇಶ ಪಡೆಯುವ ದಿನಾಂಕ | 13–07–2026 ರಿಂದ 31–07–2026 ವರೆಗೆ |
| 02 | ರೂ.2,000/– ದಂಡ ಶುಲ್ಕದೊಂದಿಗೆ ಪ್ರವೇಶಾತಿ ದಿನಾಂಕ | 01–08–2026 ರಿಂದ 10–08–2026 ವರೆಗೆ |
| **03** | **ಅರ್ಹತಾ ಪ್ರಮಾಣ ಪತ್ರ ವಿತರಿಸುವ ದಿನಾಂಕ** | **13–07–2026 ರಿಂದ 10–08–2026 ವರೆಗೆ** |
| 04 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮಹಿಳಾ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ, ಉಳಿದ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರದ ಶುಲ್ಕ (Within Karnataka) | ರೂ.3,330/– |
| 05 | ಅನ್ಯರಾಜ್ಯದಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರದ ಶುಲ್ಕ (Non-Karnataka) | ರೂ.6,660/– |
| 06 | NRI Students ಅರ್ಹತಾ ಪ್ರಮಾಣ ಪತ್ರದ ಶುಲ್ಕ | ರೂ.13,310/– |
| 07 | Foreign Students ಅರ್ಹತಾ ಪ್ರಮಾಣ ಪತ್ರದ ಶುಲ್ಕ | ರೂ.19,965/– |

ಮುಂದುವರೆದು . . . . . . 02

## :ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಅಂಶಗಳು:

1) ಎಲ್ಲ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯದ UUCMS ತಂತ್ರಾಂಶದ Admin Login ದಲ್ಲಿ 2026–27 ನೇ ಸಾಲಿಗೆ Seat Setup Allocation Method ಹಾಗೂ Fees Details ಅಳವಡಿಸುವುದು ಕಡ್ಡಾಯವಾಗಿರುತ್ತದೆ.
2) ವಿದ್ಯಾರ್ಥಿಯು UUCMS ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಸ್ನಾತಕ ಕೋರ್ಸನ 10 ಅಂಕಿಯ UUCMS ID ಅನ್ನು ಉಪಯೋಗಿಸಿ ಅರ್ಜಿ ಸಲ್ಲಿಸುವುದು. (ಉದಾ:2206684111) ಒಂದು ವೇಳೆ UUCMS ID ಯ Password ಮರೆತು ಹೋಗಿದ್ದಲ್ಲಿ forgot Password Retrieve/Reset ಮಾಡಿಕೊಳ್ಳುವುದು.
3) ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ, UGC ಯಿಂದ ಮಾನ್ಯತೆ ಹೊಂದಿದ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳು ಹಾಗೂ ಅನ್ಯರಾಜ್ಯದ ಇತರೆ ವಿಶ್ವವಿದ್ಯಾಲಯಗಳ ಅಭ್ಯರ್ಥಿಗಳಿಂದ ಅರ್ಹತಾ ಪ್ರಮಾಣ ಪತ್ರಗಳನ್ನು (Eligibility Certificate) ಕಡ್ಡಾಯವಾಗಿ ಪ್ರವೇಶ ಪ್ರಕ್ರಿಯೆ ಮುಂಚಿತವಾಗಿ ಪಡೆದುಕೊಂಡು, ಪ್ರವೇಶಗಳನ್ನು ಪಡೆದುಕೊಳ್ಳತಕ್ಕದ್ದು.
4) ಅರ್ಹತಾ ಪ್ರಮಾಣ ಪತ್ರವನ್ನು (Eligibility Certificate) ವಿಶ್ವವಿದ್ಯಾಲಯದ ಕುಲಸಚಿವರ ಕಾರ್ಯಾಲಯದ ವಿದ್ಯಾಮಂಡಳ ವಿಭಾಗದಲ್ಲಿ ನೀಡಲಾಗುವುದು. ನಿಗದಿತ ನಮೂನೆಯನ್ನು ಹಾಗೂ ಶುಲ್ಕವನ್ನು ಭರ್ತಿ ಮಾಡಿ, SSLC ಅಂಕಪಟ್ಟಿ ಹಾಗೂ ಸ್ನಾತಕ/ಸ್ನಾತಕೋತ್ತರ ಪದವಿಯ 1 ರಿಂದ 6ನೇ ಸೆಮಿಸ್ಟರ್‌ನ ಅಂಕಪಟ್ಟಿ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳ ದೃಢೀಕೃತ ದಾಖಲೆಗಳೊಂದಿಗೆ, ಮೂಲ ಅಂಕಪಟ್ಟಿಗಳನ್ನು ಪರಿಶೀಲನೆಗೊಳಪಡಿಸಿ, ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು.
5) UGC ಯಿಂದ ಮಾನ್ಯತೆ ಹೊಂದಿದ ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಶೇಕಡಾ 45% ಅಂಕಗಳು ಮತ್ತುಇತರೆ ಅಭ್ಯರ್ಥಿಗಳ ಆಂತರಿಕ ಅಂಕಗಳು ಸೇರಿ ಕನಿಷ್ಟ ಶೇಕಡಾ 50% ಅಂಕ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಪ್ರವೇಶಾತಿಗೆ ಪರಿಗಣಿಸತಕ್ಕದ್ದು.
6) ಒಂದು ವೇಳೆ UGC ಯಿಂದ ಮಾನ್ಯತೆ ಹೊಂದಿರದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ. ಅಂತಹ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅರ್ಹತಾ ಪ್ರಮಾಣ ಪತ್ರವನ್ನು ನೀಡಲಾಗುವುದು.
7) **2023–24 ರಿಂದ 2025–26 ನೇ ಸಾಲಿನಲ್ಲಿ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣಗೊಂಡಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಮೂರು ವರ್ಷ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣಗೊಂಡಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ** ತಮ್ಮ ಶಿಕ್ಷಣ ಮೊಟಕುಗೊಳಿಸಿರುವುದಕ್ಕೆ ಸೂಕ್ತ ಕಾರಣ ನೀಡಿ, Notary ಯಾಗಿರುವ Bond ಅಥವಾ Gap Certificate ಅನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ತಮ್ಮ ಪ್ರವೇಶಾತಿ/ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದು.
8) UGC ಯ ಮಾನ್ಯತೆ ಬಗ್ಗೆ ವಿಶ್ವವಿದ್ಯಾಲಯಕ್ಕೆ ಅನುಮಾನ ಬಂದರೆ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಕಳುಹಿಸಿ, ಮಾನ್ಯತೆ ಹಾಗೂ ಅಂಕಪಟ್ಟಿಗಳ ಬಗ್ಗೆ ಪರಿಶೀಲನೆಗೊಳಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು.
9) ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶ ಪಡೆದುಕೊಂಡಿರುವುದು ಕಂಡು ಬಂದಲ್ಲಿ ಕಿ.ರಾ.ಚ.ವಿ. ಸ್ನಾತಕ ಕೋರ್ಸಿನ ನಿಯಮಾವಳಿ ಪ್ರಕಾರ, ಪ್ರತಿ ವಿದ್ಯಾರ್ಥಿಗೆ ರೂ.1,000/- ರಂತೆ ದಂಡವನ್ನು ಮತ್ತು ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಗೆ ಪ್ರತಿ ವಿದ್ಯಾರ್ಥಿಯಂತೆ ರೂ.12,000/- ದಂಡದ ಶುಲ್ಕವನ್ನು ಮತ್ತು ವಿಶ್ವವಿದ್ಯಾಲಯದಅರ್ಹತಾ ಪ್ರಮಾಣ ಪತ್ರದ ಶುಲ್ಕ ಆಕರಣೆ ಮಾಡಲಾಗುವುದು. ಇದಕ್ಕೆತಪ್ಪಿದ್ದಲ್ಲಿ ಪ್ರವೇಶವನ್ನು ರದ್ದುಪಡಿಸಲಾಗುವುದು.
10) **2026–27 ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಮತ್ತು ಶೈಕ್ಷಣಿಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ನಿಗದಿಪಡಿಸಿದ ಶೈಕ್ಷಣಿಕ ವೇಳಾಪಟ್ಟಿಯಂತೆ ನಡೆಸತಕ್ಕದ್ದು.**
11) NCTE/ನ್ಯಾಯಾಲಯದ ಆದೇಶಗಳು/ಉನ್ನತ ಶಿಕ್ಷಣ ಇಲಾಖೆ/ಮತ್ತು ವಿಶ್ವವಿದ್ಯಾಲಯದ ಆದೇಶಗಳನ್ನು ಪಾಲಿಸತಕ್ಕದ್ದು.
12) **ಸರಕಾರದಿಂದ ಅನುಮತಿ ಪಡೆದುಕೊಂಡು ಬರುವ ಶಾಲಾ ಶಿಕ್ಷಕರ ಯಾದಿ ಸಿದ್ದಮಾಡಿಕೊಂಡು ಪ್ರವೇಶ ಪಡೆಯುವ ಪೂರ್ವದಲ್ಲಿ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದುಕೊಳ್ಳತಕ್ಕದ್ದು.**
13) **ನಿಗದಿಪಡಿಸಿದ ಪ್ರವೇಶ ಮಿತಿಯೊಳಗೆ ಪ್ರವೇಶ ಪಡೆಯತಕ್ಕದ್ದು, ಪ್ರವೇಶ ಮಿತಿಯನ್ನು ಉಲ್ಲಂಘನೆ ಮಾಡಬಾರದು.**
14) ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕವನ್ನು ನಿಗದಿತ ಅವಧಿಯಲ್ಲಿ UUCMS ತಂತ್ರಾಂಶದಲ್ಲಿ ಆನ್–ಲೈನ್ ಮೂಲಕ ಪಾವತಿಸಿ ಪ್ರವೇಶವನ್ನು ಪಡೆದುಕೊಳ್ಳುವುದು.
15) 2026–27 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿದ ದಿನಾಂಕದಂದು ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಆನ್–ಲೈನ್ ಪ್ರತಿಗಳನ್ನು ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸುವುದು.
16) ವಿದ್ಯಾರ್ಥಿಗಳು ಲಿಖಿತವಾಗಿ ಆಯ್ಕೆ ಮಾಡಿಕೊಂಡ ಬೋಧನಾ ವಿಷಯಗಳ ತರಗತಿಗಳಿಗೆ ಮಾತ್ರ ಹಾಜರುಪಡಿಸಿಕೊಳ್ಳುವುದು.
17) ವಿಶ್ವವಿದ್ಯಾಲಯದ ವೆಬ್–ಸೈಟ್‌ನಲ್ಲಿ ಅಳವಡಿಸಿದ ಸ್ನಾತಕ B.P.Ed ಕೋರ್ಸಗಳ ಪಠ್ಯಕ್ರಮಗಳನ್ನೇ ಕಡ್ಡಾಯವಾಗಿ ತರಗತಿಗಳಲ್ಲಿ ಬೋಧಿಸುವುದು.

ಮುಂದುವರೆದು. . . .. . 03

18) UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು Aadhar Card ನಲ್ಲಿ ಇರುವ ಹಾಗೆ ಸರಿಯಾಗಿ ಭರ್ತಿ ಮಾಡತಕ್ಕದ್ದು, ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿ ಮಾಡಿದ್ದಲ್ಲಿ ಮುಂದಿನ ಎಲ್ಲ ಆಗುಹೋಗುಗಳಿಗೆ ವಿದ್ಯಾರ್ಥಿಗಳು ಹಾಗೂ ಪ್ರಾಚಾರ್ಯರೇ ನೇರ ಜವಾಬ್ದಾರರಾಗಿರುತ್ತಾರೆ.

19) ವಿಶ್ವವಿದ್ಯಾಲಯವು ಹೊರಡಿಸುವ ಸುತ್ತೋಲೆಗಳಿಗೆ ಪ್ರಥಮ ಆಧ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

20) ಪರೀಕ್ಷೆಗೆ ಸಂಬಂಧಪಟ್ಟ ಸುತ್ತೋಲೆಗಳಿಗೆ ಆಧ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

21) 2026-27 ನೇ ಸಾಲಿನ ಪ್ರವೇಶ ನಿಯಮಾವಳಿಗನುಗುಣವಾಗಿ ಪ್ರವೇಶ ಪಡೆಯುವುದು.

22) ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in ವೆಬ್-ಸೈಟ್‌ನ್ನು ನೋಡತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಕಚೇರಿ ದೂರವಾಣಿ ಸಂಖ್ಯೆ:**0831-2565241** ಅನ್ನು ಸಂಪರ್ಕಿಸುವುದು.

23) UUCMS ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 08024411500 ಹಾಗೂ E-Mail ID uucms@rcub.ac.in ಅನ್ನು ಸಂಪರ್ಕಿಸಬಹುದು.

ಸಂತೋಷ ಕಾಮಗೌಡ, ಕೆ.ಎ.ಎಸ್
ಕುಲಸಚಿವರು
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಲಗತ್ತು: 2026-27 ನೇ ಸಾಲಿನ ಬಿ.ಪಿ.ಇಡಿ ಪ್ರಥಮ ಸೆಮಿಸ್ಟರ್ ಪ್ರವೇಶಾತಿ ಶುಲ್ಕದ ಅಧಿಸೂಚನೆ ಪ್ರತಿ.**

**ಇವರಿಗೆ:**

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಯ ಎಲ್ಲ ಸಂಯೋಜಿತ ಬಿ.ಪಿ.ಇಡಿ (B.P.Ed) ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ), ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಡೀನರು, ಶಿಕ್ಷಣ ನಿಕಾಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. UUCMS ನೋಡಲ್ ಅಧಿಕಾರಿಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ಕಿರಾಚವಿ ಬೆಳಗಾವಿ.
6. ಮಾನ್ಯ ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕಿರಾಚವಿ ಬೆಳಗಾವಿ.
7. ರಕ್ಷಾ ಪ್ರತಿ.

ಉಪಕುಲಸಚಿವರು
ಉಪ ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ